OS 117/2019
DW-2

<u>ದಿನಾಂಕಃ 25-11-2025.</u>

**<u>ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟಿ ಸವಾಲುಃ ವಾದಿಗಳ ಪರ ಶ್ರೀ RHK ಮಾನ್ಯ ವಕೀಲರಿಂದಃ</u>**

ನಾನು ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪತ್ರದ ವಿಚಾರಗಳು ಕನ್ನಡ ಭಾಷೆಯಲ್ಲಿರುತ್ತವೆ. ನಾನೇ ನನ್ನ ಸದರಿ ಪ್ರಮಾಣ ಪತ್ರದ ಮುಖ್ಯ ವಿಚಾರಣೆಗಳನ್ನು ಹೇಳಿ ಬರೆಸಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪತ್ರದಲ್ಲಿ ನನ್ನ ವಯಸ್ಸು 66 ವರ್ಷ ಎಂದು ಬರೆಸಿರುವುದು ಸರಿ ಇರುತ್ತದೆ.

2. ನಾನು ವಾದಿಗಳ ತಂದೆಯವರನ್ನು ನೋಡಿರುತ್ತೇನೆ. ನಾನು ಶ್ರೀ ಹನಮಂತ್ರಾಯ ತಂದೆ ತಿಮ್ಮಯ್ಯ ಇವರನ್ನು ನೋಡಿರುವುದಿಲ್ಲ. ನನಗೆ ಸದರಿ ಶ್ರೀ ಹನಮಂತ್ರಾಯ ತಂದೆ ತಿಮ್ಮಯ್ಯ ಇವರ ಪರಿಚಯ ಇರುವುದಿಲ್ಲ. ಸದರಿ ಖರೀದಿ ಪತ್ರ ಆಗುವ ಸಂದರ್ಭದಲ್ಲಿ ಉಪ ನೋಂದಣಾಧಿಕಾರಿಯವರ ಕಚೇರಿಗೆ ನಿಂಗಪ್ಪ ಮತ್ತು ಹನಮಂತ್ರಾಯ, ಮೇಘಪ್ಪ, ಯಂಕಪ್ಪ ಮತ್ತು ಚಂದ್ರಾ ಹಾಜರಿದ್ದರು. ಸದರಿ ಸಂದರ್ಭದಲ್ಲಿ ಸದರಿ ಸ್ವತ್ತುಗಳನ್ನು ಖರೀದಿ ಮಾಡಿದ್ದರು ಕೂಡಾ ಹಾಜರಿದ್ದು ಹಾಗೂ ಇಬ್ಬರು ಪಂಚರು ಇದ್ದು ನನಗೆ ಅವರ ಹೆಸರುಗಳು ಗೊತ್ತಿರುವುದಿಲ್ಲ. ಸದರಿ ಪಂಚರು ಸದರಿ ಖರೀದಿ ಪತ್ರಕ್ಕೆ ತಮ್ಮ ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೋ ಅಥವಾ ಸಹಿಗಳನ್ನು ಮಾಡಿರುತ್ತಾರೋ ನನಗೆ ಗೊತ್ತಿರುವುದಿಲ್ಲ.

3. ನಾವು ಮೂರು ಜನ ಅಣ್ಣ ತಮ್ಮಂದಿರು ಅವರೆಂದರೇ, ನಾನು, ಶ್ರೀ ಲಿಂಬ ನಾಯಕ ಹಾಗೂ ಶ್ರೀ ವಿರೂಪಾಕ್ಷಪ್ಪ. ದಾವಾ ಸ್ವತ್ತುಗಳನ್ನು ಹೊರತಪಡಿಸಿದರೇ ನಮ್ಮ ಮನೆತನಕ್ಕೆ ಬೇರೆ ಸ್ವತ್ತುಗಳು ಇರುತ್ತವೆ. ನನಗೆ ಸದರಿ ಸ್ವತ್ತುಗಳ ಸರ್ವೆ ನಂಬರ ಗೊತ್ತಿರುವುದಿಲ್ಲ. ನಿಡಿ.80 ರಲ್ಲಿ ನಮೂದು ಮಾಡಿದಂತೆ ಅದರ ಮೊದಲು ನಮ್ಮ ಅಣ್ಣ ತಮ್ಮಂದಿಯರ ನಡುವೆ ಸ್ವತ್ತುಗಳಲ್ಲಿ ಯಾವುದೇ ಪಾಲು ವಾಟ್ನಿ ಆಗಿರುವುದಿಲ್ಲ ಎಂದರೆ ಸರಿ. ನಿಡಿ.80 ಆಗುವ ಸಂದರ್ಭದಲ್ಲಿ ಪಾಲು ವಾಟ್ನಿಯಲ್ಲಿ ನಮ್ಮ ಹಿರಿಯರ ಸ್ವತ್ತುಗಳನ್ನು ಸೇರಿಸಿರುವುದಿಲ್ಲ ಎಂದರೆ ಸರಿ. ನಮ್ಮ ಹಿರಿಯರ ಸ್ವತ್ತುಗಳು ಈ ಮೊದಲು ನಮ್ಮ ತಂದೆ ಶ್ರೀ ನೂರಪ್ಪ ಇವರ ಹೆಸರಿನಲ್ಲಿದ್ದವು. ದಾವಾ ಸ್ವತ್ತಿಗೆ ಸಂಬಂಧಿಸಿದ ಪಹಣಿಗಳನ್ನು

ನಾನು ನೋಡಿರುತ್ತೇನೆ. ದಿನಾಂಕ 25-05-1998 ರಂದು ನಾವುಗಳು ಸದರಿ ವಾಟ್ನೆಯನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ.

4. ಪಾಲು ವಾಟ್ನೆಯಾಗುವ ಮುಂಚಿತವಾಗಿ ಪಹಣಿಗಳಲ್ಲಿ ನಮ್ಮ ಅಣ್ಣ ತಮ್ಮಂದಿಯರ ಹೆಸರುಗಳು ಸುಳ್ಳಾಗಿ ಬಂದಿರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ ಬಂದಿ ನನಗೆ ತಿಳಿದಿರುತ್ತದೆ. ನಾನು ಸ.ನಂ.167 ರಲ್ಲಿ 9 ಎಕರೆ ಹೊಲವನ್ನು ಖರೀದಿ ಮಾಡಿರುತ್ತೇನೆ. ಸದರಿ 9 ಎಕರೆ ಹೊಲಕ್ಕೆ ಪೂರ್ವಕ್ಕೆ ಕೋರ ಮಲ್ಲಯ್ಯ ಇವರ ಹೊಲ, ಪಶ್ಚಿಮಕ್ಕೆ ಬೀಕ್ಯಾ ಇವರ ಹೊಲ, ಉತ್ತರಕ್ಕೆ ಹಳ್ಳ ಹಾಗೂ ದಕ್ಷಿಣಕ್ಕೆ ನಮ್ಮ ತಂದೆ ನೂರಪ್ಪ ಇವರಿಗೆ ಸಂಬಂಧಿಸಿದ 2 ಎಕರೆ ಹೊಲ ಇರುತ್ತದೆ. ನಾನು ಸ.ನಂ.168 ರಲ್ಲಿ 4 ಎಕರೆ ಚಿಲ್ಲರೆ ಹೊಲವನ್ನು ಖರೀದಿ ಮಾಡಿರುತ್ತೇನೆ. ಸದರಿ 4 ಎಕರೆ ಚಿಲ್ಲರೆ ಹೊಲಕ್ಕೆ ಪೂರ್ವಕ್ಕೆ ಕೋರ ಮಲ್ಲಯ್ಯ ಇವರ ಹೊಲ, ಪಶ್ಚಿಮಕ್ಕೆ ಹಳ್ಳ, ಉತ್ತರಕ್ಕೆ ಹಳ್ಳ ಹಾಗೂ ದಕ್ಷಿಣಕ್ಕೆ ನಮ್ಮ ತಂದೆ ನೂರಪ್ಪ ಇವರಿಗೆ ಸಂಬಂಧಿಸಿದ ಹೊಲ ಇರುತ್ತದೆ.

5. ನಾನು ಯಾವ ಚೆಕ್ ಬಂದಿಯಲ್ಲಿ ಸದರಿ ಹೊಲಗಳನ್ನು ಖರೀದಿ ಮಾಡಿರುತ್ತೆನೋ ಅದನ್ನೇ ಖರೀದಿ ಪತ್ರಗಳಲ್ಲಿ ನಮೂದು ಮಾಡಿರುತ್ತೇನೆ ಎಂದರೆ ಸರಿ. ಸದರಿ ಚೆಕ್ ಬಂದಿಗಳನ್ನೇ ಸದರಿ ಖರೀದಿ ಪತ್ರಗಳಲ್ಲಿ ನಮೂದು ಮಾಡಲಾಗಿರುತ್ತದೆ. ನಾನು ಸದರಿ ಚೆಕ್ ಬಂದಿಯನ್ನು ಸದರಿ ಖರೀದಿ ಪತ್ರಗಳಲ್ಲಿ ಉಲ್ಲೇಖ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರವಾಗುವ ಮುಂಚಿತವಾಗಿ ನಮ್ಮ ಮನೆಯಲ್ಲಿ ಮಾತುಕತೆ ಆಗಿರುತ್ತದೆ. ನನ್ನ ಹಾಗೂ 1 ನೇ ಪ್ರತಿವಾದಿಯ ಮನೆ ಬೇರೆ ಬೇರೆಯಾಗಿರುತ್ತವೆ. ನನ್ನ ಹಾಗೂ 1 ನೇ ಪ್ರತಿವಾದಿಯ ಮನೆಗಳು ಅಂದಾಜಾಗಿ 100 ಪೀಟ್ ಅಂತರದಲ್ಲಿರುತ್ತವೆ. ಸದರಿ ವ್ಯವಹಾರದ ಮಾತುಕತೆಯ ಸಂದರ್ಭದಲ್ಲಿ ನಿಂಗಪ್ಪ, ಹನಮಂತ್ರಾಯ ಹಾಗೂ ಇಬ್ಬರು ಪಂಚರು, ಚಂದ್ರಪ್ಪ, ಮೇಘಪ್ಪ ಹಾಗೂ ಯಂಕಪ್ಪ ಹಾಜರಿದ್ದರು. ನನಗೆ ಸದರಿ ಪಂಚರ ಹೆಸರುಗಳು ಗೊತ್ತಿರುವುದಿಲ್ಲ. ಸದರಿ ಖರೀದಿಯು ರೂ.60,000/- ಗಳಿಗೆ ಮಾತುಕತೆ ಆಗಿರುತ್ತದೆ. ನಾನು ಹಾಗೂ 1 ನೇ ಪ್ರತಿವಾದಿ ತಲಾ ರೂ.30,000/- ಗಳನ್ನು ನಗದು ರೂಪದಲ್ಲಿ ಸದರಿ ಖರೀದಿ ಮಾತುಕತೆಯ ಸಂದರ್ಭದಲ್ಲಿ ಕೊಟ್ಟಿರುತ್ತೇವೆ. ನಾವುಗಳು ಸದರಿ ಖರೀದಿ ಮಾತುಕತೆಯ ಸಂದರ್ಭದಲ್ಲಿ ರೂ.30,000/- ಗಳನ್ನು ಕೊಟ್ಟರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು

ಸದರಿ ಖರೀದಿ ಪತ್ರಗಳನ್ನು ನೋಡಿರುತ್ತೇನೆ. ನಾವುಗಳು ಸದರಿ ಹಣವನ್ನು ಕೊಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಸದರಿ ಖರೀದಿಯ ಸಂದರ್ಭದಲ್ಲಿ ನನ್ನ ವಯಸ್ಸು 16 ರಿಂದ 18 ವರ್ಷ ಇತ್ತು. ಸದರಿ ಸಂದರ್ಭದಲ್ಲಿ ಹೊಲ ಮನೆ ಕೆಲಸ ಮಾಡಿಕೊಂಡಿದ್ದು ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿ. ನಾನು, ವಾದಿಗಳ ತಂದೆಯವರಿಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಹಾಗೂ ನಾನು ಹಾಗೂ 1 ನೇ ಪ್ರತಿವಾದಿ ಸೇರಿ ಸುಳ್ಳು ಖರೀದಿ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.